# ಫಿಶಿಂಗ್ ಅಕ್ರಮಕ್ಕೆ ಒಳಗಾಗುವ ಗ್ರಾಹಕರಿಗೆ ಆರ್‌ಬಿಐಯಿಂದ ಮಹತ್ವದ ಸೂಚನೆ

- **ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದವರಿಂದ ಬಂದಿದೆ ಎಂದು ಹೇಳಿಕೊಳ್ಳಲಾಗುವ ಮೋಸದ (ಫಿಶಿಂಗ್) ಇ- ಮೇಲ್‌ಗಳಿಗೆ ಪ್ರತಿಕ್ರಯಿಸಬೇಡಿ**

- ''ಬ್ಯಾಂಕ್ ಖಾತೆಯ ವಿವರಗಳನ್ನು ಅಪ್‌ಡೇಟ್ ಮಾಡಿಕೊಳ್ಳಬೇಕೆಂದು ಬ್ಯಾಂಕ್ ಗ್ರಾಹಕರುಗಳಿಗೆ ಆಹ್ವಾನಿಸುತ್ತ'' ತನ್ನ ಹೆಸರಿನಿಂದ ಇ-ಮೇಲ್ ಕಳುಹಿಸುತ್ತಿರುವುದು ಭಾರತೀಯ ರಿಜರ್ವ್ ಬ್ಯಾಂಕಿನ ಗಮನಕ್ಕೆ ಬಂದಿದೆ.

- ಇಂಥ ಯಾವುದೇ ಇ-ಮೇಲ್‌ಗಳನ್ನು **ಕಳುಹಿಸಲಾಗುವುದಿಲ್ಲ** ಎಂದು ರಿಜರ್ವ್ ಬ್ಯಾಂಕ್ ಸ್ಪಷ್ಟಪಡಿಸುತ್ತಿದೆ. ರಿಜರ್ವ್ ಬ್ಯಾಂಕ್ ಆಗಲಿ ಅಥವಾ ಬ್ಯಾಂಕುಗಳಾಗಲಿ ಯಾವುದೇ ಉದ್ದೇಶಕ್ಕಾಗಿ ಬ್ಯಾಂಕ್ ಖಾತೆಯ ಯಾವುದೇ ವಿವರಗಳನ್ನು ಕೇಳುವ ಸಂವಹನವನ್ನು (ಕಮ್ಯುನಿಕೇಶನ್) ಕಳುಹಿಸುವುದಿಲ್ಲ. **ಇಂಥ ಇ-ಮೇಲ್‌ಗಳಿಗೆ ಪ್ರತಿಕ್ರಿಯೆ ನಿಡದೇ ಇರಲು ಮತ್ತು ತಮ್ಮ ಖಾತೆಯ ಯಾವುದೇ ವಿವರಗಳನ್ನು ಯಾವುದೇ ಉದ್ದೇಶಕ್ಕಾಗಲಿ ಯಾರೊಂದಿಗೂ ಹಂಚಿಕೊಳ್ಳದೇ ಇರಲು ಭಾರತೀಯ ರಿಜರ್ವ್ ಬ್ಯಾಂಕ್ ಸಾರ್ವಜನಿಕರಿಗೆ ಈ ಮೂಲಕ ಕೇಳಿಕೊಳ್ಳುತ್ತದೆ.**

- ಕೆಲವು ವಂಚಕರು ಪತ್ರಗಳು, ಇ-ಮೇಲ್‌ಗಳು, ಮೊಬೈಲ್ ಫೋನ್, ಎಸ್‌ಎಮ್‌ಎಸ್ ಮುಂತಾದವುಗಳ ಮೂಲಕ ಸಾರ್ವಜನಿಕರಿಗೆ ಆಕರ್ಷಕ ಕೊಡುಗೆಗಳ ಮೆಸೇಜ್‌ಗಳನ್ನು ಕಳುಹಿಸುತ್ತಿದ್ದಾರೆ. ಈ ಕೊಡುಗೆಗಳು ಸಾಚಾ ಆಗಿವೆ ಎಂದು ತೋರಿಸಲು ಕೆಲವೊಮ್ಮೆ ಭಾರತೀಯ ರಿಜರ್ವ್ ಬ್ಯಾಂಕಿನಂಥ ಸಾರ್ವಜನಿಕ ಪ್ರಾಧಿಕಾರಗಳಂತೆಯೇ ಕಾಣುವ ಲೆಟರ್ ಹೆಡ್/ವೆಬ್ ಸೈಟ್‌ಗಳ ಮೂಲಕ ಸಂವಹನವನ್ನು ಕಳುಹಿಸುತ್ತಿವೆ. ಈ ಕೊಡುಗೆಗಳ ಮೇಲೆ ಅಂಥಹ ಪ್ರಾಧಿಕಾರಗಳ ಉಚ್ಚ ಕಾರ್ಯಕಾರಿ/ಹಿರಿಯ ಅಧಿಕಾರಿಗಳ ಸಹಿಯೂ ಕಾಣುತ್ತದೆ. ಆದರೆ ಅಂಥಹ ಅಧಿಕಾರಿಗಳ ಹೆಸರು ಮಾತ್ರ ಸರಿಯಾಗಿದ್ದು ಸಹಿ ಜಾಲಿ (ಕಪಟತನದ್ದು)ಯಾಗಿರುತ್ತದೆ. ಕೊಡುಗೆಯ ಪತ್ರ ರಿಜರ್ವ್ ಬ್ಯಾಂಕ್/ ಸಾರ್ವಜನಿಕ ಪ್ರಾಧಿಕಾರಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಗಳ ಸಂಪರ್ಕ ವಿವರಗಳನ್ನೂ ಹೊಂದಿರುತ್ತದೆ. **ರಿಜರ್ವ್ ಬ್ಯಾಂಕ್ ವಿದೇಶದಿಂದ ಬರುವ ಇಂಥ ಯಾವುದೇ ಹಣದ ಕೊಡುಗೆಗಳಿಗೆ ಪ್ರತಿಕ್ರಯಿಸದೇ ಇರುವಂತೆ ಈ ಮೂಲಕ ಮುನ್ನೆಚ್ಚರಿಕೆ ನೀಡುತ್ತಿದೆ.**

- **ಹಿನ್ನೆಲೆಯನ್ನು ಹೊಂದಿರದ ಸಂಸ್ಥೆಗಳಿಂದ ಬರುವ ಇಂಥಹ ಯೋಜನೆಗಳು/ ಕೊಡುಗೆಗಳಲ್ಲಿ ಭಾಗವಹಿಸಿ ಇವುಗಳಿಗೆ ಹಣ ಕಳುಹಿಸಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ಎಚ್ಚರಿಕೆಯನ್ನು ನೀಡುತ್ತಿದೆ** ಹೀಗೆ ಹಣ ಕಳುಹಿಸುವುದು ಕಾನೂನು ಬಾಹಿರವಾಗಿದ್ದು ಮತ್ತು ಭಾರತದ ಯಾವುದೇ ನಿವಾಸಿ ಇಂಥಹ ಪಾವತಿಗಳನ್ನು ಪ್ರತ್ಯಕ್ಷವಾಗಿ/ಪರೋಕ್ಷವಾಗಿ ಭಾರತದಲ್ಲಿ ಸಂಗ್ರಹಿಸುವುದಾಗಲಿ ಅಥವಾ ಹೊರಗಡೆ ಕಳುಹಿಸುವುದರಲ್ಲಾಗಲ್ಲಿ ತೊಡಗಿಕೊಂಡಿರುವುದಾಗಿ ಕಂಡು ಬಂದಲ್ಲಿ ಅಂಥವರ ವಿರುದ್ಧ ವಿದೇಶಿ ವಿನಿಮಯ ನಿರ್ವಹಣಾ ಕೂನೂನು, 1999 ಫಾರೆನ್ ಎಕ್ಸ್‌ಚೇಂಜ್ ಮ್ಯಾನೇಜ್‌ಮೆಂಟ್ ಆ್ಯಕ್ಟ್‌ನ ವಿರುದ್ಧವಾಗಿದೆಯೆಂದು ಪ್ರಕರಣವನ್ನು ನಡೆಸಲಾಗುವುದು. ಇಂಥಹ ಕೊಡುಗೆಗಳು ಮೋಸದ್ದಾಗಿದ್ದು ತಾವು ಇಂಥ ಕೊಡುಗೆಗಳನ್ನು ಪಡೆದಲ್ಲಿ ಅಥವಾ ಇಂಥಹ ಯಾವುದೇ ಮೋಸಕ್ಕೆ ಬಲಿಯಾದಲ್ಲಿ ಸಾರ್ವಜನಿಕರು ಸ್ಥಳೀಯ ಪೋಲಿಸ್/ಸೈಬರ್ ಅಪರಾಧ ಪ್ರಾಧಿಕಾರದಲ್ಲಿ ತಕ್ಷಣ ದೂರನ್ನು ದಾಖಲಿಸಬೇಕು.

- **ರಿಜರ್ವ್ ಬ್ಯಾಂಕ್ ಯಾವುದೇ ಹೆಸರಿನಿಂದ ಯಾವುದೇ ಪ್ರಕಾರದ ಹಣದ ವ್ಯವಸ್ಥೆಗೆ ಜವಾಬ್ದಾರವಲ್ಲ ಮತ್ತು ಅದು ಇಂಥಹ ಮೋಸದ ಸಂವಹನದಿಂದ ಕಳುಹಿಸಿದ ಹಣವನ್ನು ವಸೂಲಿ ಮಾಡಲೂ ಬಾಧ್ಯವಲ್ಲ.**